

ಚೂಡಿ ಪೂಜೆ



# ಸೋ ಎನ್ನಿರೆ... ಸೋಣ ಎನ್ನಿರೆ...

**ತುಳುವರ ಪಾಲಿಗೆ ಶ್ರಾವಣ ಎನ್ನುವುದು 'ಸಿಂಹ ಮಾಸ'ದ ಸಂಭ್ರಮ. 'ಸೋಣ ತಿಂಗಳು', 'ಧರ್ಮದ ತಿಂಗಳು' ಎಂದು ಕರೆಸಿಕೊಳ್ಳುವ ಈ 'ಸಿಂಹ ಮಾಸ' ಕರಾವಳಿಯ ರೈತಾಪಿ ಸಂಸ್ಕೃತಿಯ ಪ್ರತಿಬಿಂಬವೂ ಹೌದು. ಈಗ ಕೃಷಿ ಸಂಸ್ಕೃತಿ ನಿಧಾನಕ್ಕೆ ಪಕ್ಕಕ್ಕೆ ಸರಿಯುತ್ತಿರುವಂತೆ 'ಸಿಂಹ ಮಾಸ'ದ ಸಡಗರವೂ ರಂಗು ಕಳೆದುಕೊಂಡಂತೆ ಕಾಣಿಸುತ್ತದೆ.**

■ ಕೋಡಿಬೆಟ್ಟು ರಾಜಲಕ್ಷ್ಮಿ
ಚಿತ್ರಗಳು: ಮಂಜು ನೀರೇಶ್ವಾಲ್ಯ

ಹವಾಮಾನಕ್ಕೆ ತಕ್ಕಂತೆ ಹಬ್ಬಗಳ ಆಚರಣೆಗಳೂ ಇರುತ್ತವೆ. ಕರಾವಳಿಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಲ್ಲಿ ಸೌರಮಾನ ಪದ್ಧತಿಯ ಆಚರಣೆ ಹೆಚ್ಚು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿಯೂ ತುಳುವರು ಸೌರಮಾನವನ್ನು ಆಧರಿಸಿಯೇ ಹಬ್ಬಹರಿದಿನಗಳನ್ನು ಆಚರಿಸುತ್ತಾರೆ.

ಚಾಂದ್ರಮಾನ ಪದ್ಧತಿಯ ಪ್ರಕಾರ ಬರುವ ಶ್ರಾವಣ ಮಾಸದ ಸಂಭ್ರಮದ ಮಾದರಿಯಲ್ಲಿ ತುಳುವರು 'ಸಿಂಹ ಮಾಸ'ವನ್ನು ಶ್ರದ್ಧೆ ಭಕ್ತಿಯಿಂದ ಆಚರಿಸುತ್ತಾರೆ. ಸಿಂಹ ಮಾಸವೇ ತುಳು ಭಾಷೆಯಲ್ಲಿ 'ಸೋಣ ತಿಂಗಳು'. ಇದು ಸೌರಮಾನ ಕ್ಯಾಲೆಂಡರ್‌ನ 5ನೇ ತಿಂಗಳು.

ಆಗಸ್ಟ್ 15 ಅಥವಾ 16ರಂದು ಬರುವ ಸಿಂಹ ಸಂಕ್ರಮಣವೇ ಒಂದು ಹಬ್ಬ. ಕರ್ಕಾಟಕ ತಿಂಗಳು ಅಂದರೆ ತುಳುವರ 'ಆಟಿ' ತಿಂಗಳಲ್ಲಿ ಭಾರೀ ಮಳೆ ಇರುವುದರಿಂದ ದೈವ–ದೇವರ ಕೆಲಸಗಳು ಹೆಚ್ಚು ಇರುವುದಿಲ್ಲ. ಕುಟುಂಬದ ಹಿರಿ ಮನೆಯಲ್ಲಿ ದೈವಗಳ ಗುಡಿಯ ಬಾಗಿಲನ್ನು ಸಿಂಹ ಸಂಕ್ರಮಣದಂದು ಮುಂಜಾನೆ ತೆರೆದು ಪೂಜಿಸುವ 'ಪರ್ವ' ನಡೆಯುತ್ತದೆ.

ಸೋಣವನ್ನು ಧರ್ಮದ ತಿಂಗಳೆಂದು ಹಿರಿಯರು ಕರೆಯುತ್ತಾರೆ. ಹೀಗೆ ಕರೆಯುವುದಕ್ಕೆ ಕೃಷಿಯ ಹಿನ್ನೆಲೆಯಿದೆ. ಕರಾವಳಿಯಲ್ಲಿ ಹಲವಾರು ನದಿಗಳು ಇರುವುದರಿಂದ ಹೆಚ್ಚಿನ ಕೃಷಿ ಭೂಮಿ ಮಳೆಗಾಲದಲ್ಲಿ ನೆರೆಯಿಂದ ಆವೃತವಾಗಿರುತ್ತದೆ. ಆದ್ದರಿಂದ ಮೂರು ಬೆಳೆ ಬೆಳೆಯಬಲ್ಲ ಕೃಷಿಕರಷ್ಟೇ ಮಳೆಗಾಲದ 'ಎಣೆಲು' ಬೆಳೆ ಬೆಳೆಯಬಲ್ಲರು. ನೀರಾವರಿ ಇದ್ದವರಷ್ಟೇ ಬೇಸಿಗೆಯ ಬೆಳೆ ಮಾಡಬಲ್ಲರು.

ಆದರೆ ಸೋಣ ತಿಂಗಳಲ್ಲಿ ಪ್ರವಾಹವೆಲ್ಲ ಇಳಿದು ಎರಡನೇ ಬೆಳೆಯನ್ನು ಎಲ್ಲ ಕೃಷಿಕರೂ ಮಳೆಯನ್ನು ಆಧರಿಸಿಯೇ ಸಾಗುವಳಿ ಮಾಡಬಹುದು. ಅದಕ್ಕಾಗಿ ಆಟಿ ತಿಂಗಳಿನಲ್ಲಿಯೇ ಬಿತ್ತನೆ ಮಾಡಿ ಆ ಭತ್ತದ ಸಸಿಯನ್ನು ನೆಡಲು ಸೋಣ ತಿಂಗಳಲ್ಲಿ ಹೊಲಗಳನ್ನು ಹದ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ದೀರ್ಘಕಾಲ ಬೆಳೆಯುವ ಭತ್ತದ ತಳಿಗಳಿದ್ದವು. ಸೋಣದಲ್ಲಿ ನಾಟಿಯಾದ ಭತ್ತವು ನವೆಂಬರ್–ಡಿಸೆಂಬರ್‌ನಲ್ಲಿ ತಿಳಿಗಾಳಿ ಬೀಸಿದ ಬಳಿಕವೇ ತೆನೆಯೊಡೆಯುತ್ತದೆ. ಮಕರ ಸಂಕ್ರಾಂತಿಗೆ ಮನೆಯಲ್ಲಿ ಸಂತಸ ತಂಬಬೇಕಾದರೆ ಸೋಣ ತಿಂಗಳಲ್ಲಿ ಶ್ರಮಪಡಬೇಕು. ಇದೇ ಬೆಳೆಯನ್ನು 'ಸುಗ್ಗಿಕಯಮೆ' ಎಂದು ಹಿರಿಯರು ಹೇಳುತ್ತಿದ್ದರು. ಈ ಸಂದರ್ಭದಲ್ಲಿ ನಾಟಿ ಮಾಡಿ ಬೆಳೆದ ಭತ್ತದ ಸಸಿಯಲ್ಲಿ ತೆನೆಯೊಡೆದ ಕೂಡಲೇ 'ಹೊಸಬೆಳೆ' ಹಬ್ಬ (ಪುದ್ದರ್) ಮಾಡುವುದು ವಾಡಿಕೆ. ಎಲ್ಲರಿಗೂ ಅನ್ನಕೊಡುವ ಕೃಷಿಕಾರ್ಯ ಶುರುವಾಗುವುದರಿಂದ, ದೈವದ ಪರ್ವ ಮತ್ತು ದೇವರ ಹಬ್ಬಗಳು ನಡೆಯುವ ಈ ತಿಂಗಳನ್ನು ಧರ್ಮದ ತಿಂಗಳೆಂದು ಹೇಳುವುದು ವಾಡಿಕೆ.